ಓ.ಎಸ್. 81/2013

ಪಿ.ಡಬ್ಲ್ಯೂ-1

**ದಿನಾಂಕಃ 29.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್.ಬಿ.ಆರ್. ವಕೀಲರಿಂದಃ</u>

**4.** ದಿಃ 28.05.1977 ರಂದು 1 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ 30 ಗುಂಟೆ ಜಮೀನನ್ನು ಕಾಡಪ್ಪ ತಂದೆ ಮುದ್ದರಂಗಪ್ಪನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನೊಂದಿಗೆ ಬಾವಿಯಲ್ಲಿನ 1/4 ಭಾಗವನ್ನೂ ಸಹ ಕಾಡಪ್ಪನವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಕೈರೂಭಿ ಎಂದರೆ ನನ್ನ ತಾಯಿ. ದಿಃ 28.05.1977 ರಂದು 1 ನೇ ಪ್ರತಿವಾದಿ ಬರೆದುಕೊಟ್ಟಂತಹ ಕ್ರಯ ಪತ್ರಕ್ಕೆ ನನ್ನ ತಾಯಿ ಕೈರೂಭಿ ಸಹ ಒಪ್ಪಿಗೆ ಸಹಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ ದಿಃ14.10.1982 ರಲ್ಲಿ ನಾನು ದಾವಾ ಸ್ವತ್ತಿನಲ್ಲಿ 30 ಗುಂಟೆ ಜಮೀನನ್ನು ಕಾಡಪ್ಪನವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ.

**5.** 1 ನೇ ಪ್ರತಿವಾದಿಯ ಮರಣಾನಂತರ ಅವರು ಖರೀದಿ ಮಾಡಿದಂತಹ 1 ಎಕರೆ ಜಮೀನಿನ ಖಾತೆ ಅವರ ಹೆಂಡತಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ 1 ಎಕರೆ ಜಮೀನಿನಲ್ಲಿ 1 ನೇ ಪ್ರತಿವಾದಿಯ ವಾರಸುದಾರರು ಮಾತ್ರ ಸ್ವಾಧೀನದಲ್ಲಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ . ಸದರಿ 1 ಎಕರೆ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**6.** ನಾನು ಮತ್ತು 1 ನೇ ಪ್ರತಿವಾದಿ ದಾವಾ ಸರ್ವೆ ನಂಬರ್‌ನಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಸೈಯ್ಯದ್ ಮುತ್ತೂರಿ ಸಾಬ್‌ರವರಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ಸರಿಯಾದ ಮಾರುಕಟ್ಟೆ ಬೆಲೆಯನ್ನು ತೋರಿಸಿರುವುದಿಲ್ಲ ಎಂದು

ಸದರಿ ಕ್ರಯ ಪತ್ರವನ್ನು ಇಂದಿಗೂ ಸಹ ಉಪ ನೊಂದಣಾಧಿಕಾರಿಗಳು , ಮಧುಗಿರಿರವರು ಬಿಡುಗಡೆ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಸರ್ವೆ ನಂಬರ್ನಲ್ಲಿ 1 ಎಕರೆ 20 ಗುಂಟೆ ಜಮೀನಿನ ಖಾತೆ ಇಂದಿಗೂ ಸೈಯ್ಯದ್ ಮುತ್ತೂರಿ ಸಾಬ್‌ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸದರಿ 1 ಎಕರೆ 20 ಗುಂಟೆ ಜಮೀನಿನಲ್ಲಿ ನನಗೆ 30 ಗುಂಟೆ, 1 ನೇ ಪ್ರತಿವಾದಿಗೆ 30 ಗುಂಟೆ ಸೇರಿದ್ದು ಉಳಿದ ಪ್ರತಿವಾದಿಗಳಿಗೆ ಮತ್ತು ನನ್ನ ಕುಟುಂಬದ ಸದಸ್ಯರಿಗೆ ಸದರಿ 1 ಎಕರೆ 20 ಗುಂಟೆಯಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದ್ಲಿಲ ಎಂದರೆ ಸರಿ. ನಮಗೆ ದಾವಾ ಸರ್ವೆ ನಂಬರ್ನಲ್ಲಿನ 6 ಎಕರೆ 9 ಗುಂಟೆಗೆ ಮಾತ್ರ ಹಕ್ಕು ಮತ್ತು ಅಧಿಕಾರ ಇರುತ್ತದೆ ಎಂದರೆ ಸರಿ.

7. 1 ನೇ ಪ್ರತಿವಾದಿ ದಾವಾ ಸರ್ವೆ ನಂಬರ್ನಲ್ಲಿ ಖರೀದಿ ಮಾಡಿರುವ ಆಸ್ತಿಗಳಿಗೆ ಸಂಬಂಧಿಸಿದ ಕ್ರಯ ಪತ್ರಗಳನ್ನು ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಯಲ್ಲಿ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ